ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ
Mahatma Gandhi Rural Development and Panchayat Raj University, Gadag
ಕೌಶಲ್ಯ ವಿಕಾಸ ಭವನ, ಗ್ರಾಮ ಗಂಗೋತ್ರಿ ಆವರಣ, ನಾಗಾವಿ ಗದಗ-582103
Koushalya Vikas Bhavan, Grama Gangothri Campus, Nagavi, Gadag-582103
E-mail:ksrdpru@gmail.com Phone: 08372-200920, 200922

ನಂ:ಆರ್.ಡಿ.ಪಿ.ಆರ್.ಯು 11 ಶೈಕ್ಷಣಿಕ 2026 ದಿನಾಂಕ: 16-11-2026

2026–27 ನೇ ಸಾಲಿಗೆ ತಿದ್ದುಪಡಿ ಪ್ರವೇಶ ಅಧಿಸೂಚನೆ

ಉಲ್ಲೇಖ: 1) ವಿಶ್ವವಿದ್ಯಾಲಯದ ಅಧಿಕಾರಿಗಳ ಸಭೆ ದಿನಾಂಕ: 13-11-2026
2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16-11-2026

ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ 2026–27 ನೇ ಸಾಲಿಗೆ ಈ ಕೆಳಕಂಡ ವಿಷಯಗಳಲ್ಲಿ ಸ್ನಾತಕೋತ್ತರ ಪ್ರೋಗ್ರಾಮ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು ಈ ಕೆಳಕಂಡ ಸ್ನಾತಕೋತ್ತರ ಪ್ರೋಗ್ರಾಮ್‌ಗಳಿಗೆ ಖಿದ್ದಾಗಿ ತಮ್ಮ ಎಲ್ಲಾ ಶೈಕ್ಷಣಿಕ ದಾಖಲಾತಿಗಳೊಂದಿಗೆ ಹಾಜರಾಗಿ ಮೊದಲು ಅರ್ಜಿ ಸಲ್ಲಿಸಿದವರಿಗೆ ಮೊದಲ ಆದ್ಯತೆ ಮೇರೆಗೆ ಪ್ರವೇಶ ಪಡೆದುಕೊಳ್ಳುವ ಕೊನೆಯ ದಿನಾಂಕವನ್ನು **30–11–2026** ರ ವರೆಗೆ ವಿಸ್ತರಿಸಲಾಗಿದೆ.

ಎಂ.ಎ.	–	ಗ್ರಾಮೀಣಾಭಿವೃದ್ಧಿ (ಪಂಚಾಯತ್ ರಾಜ್ / ಸಹಕಾರ ನಿರ್ವಹಣೆ).
ಎಂ.ಎ.	–	ಸಾರ್ವಜನಿಕ ಆಡಳಿತ.
ಎಂ.ಎ.	–	ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ).
ಎಂ.ಎ.	–	ರಾಜ್ಯಶಾಸ್ತ್ರ (ಪಂಚಾಯತ್ ರಾಜ್ / ಗ್ರಾಮೀಣಾಭಿವೃದ್ಧಿ)
ಎಂ.ಎಸ್.ಡಬ್ಲೂ.	–	ಸಮುದಾಯ ಅಭಿವೃದ್ಧಿ / ಸಮುದಾಯ ಆರೋಗ್ಯ / ಮಾನವ ಸಂಪನ್ಮೂಲ ನಿರ್ವಹಣೆ
ಎಂ.ಕಾಂ.	–	ಉದ್ಯಮ ಶೀಲತೆ/ ಸಹಕಾರ ನಿರ್ವಹಣೆ.
ಎಂ.ಎಸ್ಸಿ.	–	ಜಿಯೋಇನ್ಫರ್ಮಾಟಿಕ್ಸ್.
ಎಂ.ಎಸ್ಸಿ.	–	ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ.
ಎಂ.ಸಿ.ಎ.	–	ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ (ಎಐ)
ಎಂ.ಪಿ.ಹೆಚ್.	–	ಸಾರ್ವಜನಿಕ ಆರೋಗ್ಯ.
ಎಂ.ಬಿ.ಎ.	–	ಗ್ರಾಮೀಣ ನಿರ್ವಹಣೆ (ಕೃಷಿ ವ್ಯವಹಾರ ನಿರ್ವಹಣೆ / ಗ್ರಾಮೀಣಾಭಿವೃದ್ಧಿ ನಿರ್ವಹಣೆ) (ಹಣಕಾಸಿನ ನಿರ್ವಹಣೆ / ಮಾನವ ಸಂಪನ್ಮೂಲ ನಿರ್ವಹಣೆ)

ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು:

- ಅರ್ಜಿ ನಮೂನೆ ಮತ್ತು ಅರ್ಹತೆ, ಪ್ರೋಗ್ರಾಮ್ ಶುಲ್ಕದ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್ ಸೈಟ್ www.ksrdpru.ac.in ನಲ್ಲಿ ನೋಡಿ ಕಡ್ಡಾಯವಾಗಿ ವಿಶ್ವವಿದ್ಯಾಲಯದ ಆನ್ ಲೈನ್ ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸುವುದು ಹಾಗೂ ಅರ್ಜಿ ಶುಲ್ಕವನ್ನು ಆನ್ ಲೈನ್‌ನಲ್ಲಿ ಪಾವತಿಸುವುದು. ಒಂದಕ್ಕಿಂತ ಹೆಚ್ಚಿನ ಪ್ರೋಗ್ರಾಮ್‌ಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರತಿ ಪ್ರೋಗ್ರಾಮ್‌ಗೆ ಪ್ರತ್ಯೇಕ ಅರ್ಜಿ ಹಾಗೂ ಅರ್ಜಿಯ ಶುಲ್ಕವನ್ನು ಪಾವತಿಸಿ ಅರ್ಜಿಸಲ್ಲಿಸುವುದು. ಸಾಮಾನ್ಯ ವರ್ಗದ ಅಭ್ಯರ್ಥಿಗಳು ರೂ.300/- ಹಾಗೂ ಪ.ಜಾ / ಪ.ಪಂಗಡ / ಪ್ರವರ್ಗ-1 / ವಿಕಲಚೇತನರು ರೂ.150/- ಅರ್ಜಿ ಶುಲ್ಕವನ್ನು ಆನ್-ಲೈನ್‌ಲ್ಲಿ ಪಾವತಿಸುವುದು ಅಥವಾ ವಿಶ್ವವಿದ್ಯಾಲಯದ ಪ್ರವೇಶ ವಿಭಾಗದಲ್ಲಿ ಖಿದ್ದಾಗಿ ಬಂದು ಅರ್ಜಿಸಲ್ಲಿಸಬಹುದಾಗಿದೆ.
- ವಿಶ್ವವಿದ್ಯಾಲಯದ ಆನ್ ಲೈನ್ ತಂತ್ರಾಂಶದಲ್ಲಿ ಅಥವಾ ವಿಶ್ವವಿದ್ಯಾಲಯದ ಪ್ರವೇಶ ವಿಭಾಗದಲ್ಲಿ ಖಿದ್ದಾಗಿ ಬಂದು ಆನ್ ಲೈನ್ ತಂತ್ರಾಂಶದಲ್ಲಿ ಅರ್ಜಿಸಲ್ಲಿಸಬಹುದಾಗಿದೆ ಸದರಿ ಅರ್ಜಿ ಪ್ರತಿಯನ್ನು ಡೌನ್ ಲೋಡ್ ಮಾಡಿ ಅರ್ಜಿಯೊಂದಿಗೆ ಅಪಲೋಡ್ ಮಾಡಿದ ಎಲ್ಲ ಶೈಕ್ಷಣಿಕ ಹಾಗೂ ಇತರೆ ದಾಖಲಾತಿಗಳ ನಕಲು ಪ್ರತಿಗಳೊಂದಿಗೆ (ಒಂದು ಸೆಟ್) ಅರ್ಜಿಯನ್ನು ಪ್ರಿಂಟ್ ತೆಗೆದುಕೊಂಡು ವಿಶ್ವವಿದ್ಯಾಲಯದ "ಕುಲಸಚಿವರು, ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಕೌಶಲ್ಯ ವಿಕಾಸ ಭವನ, ಗ್ರಾಮ ಗಂಗೋತ್ರಿ ಆವರಣ ನಾಗಾವಿ," ಇವರಿಗೆ ಖಿದ್ದಾಗಿ / ಶ್ವರಿತ ಅಂಚೆ / ಕೋರಿಯರ್ ಮೂಲಕ ದಿನಾಂಕ:30-11-2026 ರೊಳಗೆ ಸಲ್ಲಿಸಬೇಕು.
- ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಲು ಅವಕಾಶ ಇರುವುದಿಲ್ಲ.
- ಅಪೂರ್ಣ ಅರ್ಜಿಗಳಿದ್ದಲ್ಲಿ (ಪೂರಕ ದಾಖಲೆಗಳು ಇಲ್ಲದ ಪ್ರಕರಣಗಳಿದ್ದಲ್ಲಿ) ಯಾವುದೇ ಮುನ್ಸೂಚನೆ ನೀಡದೇ ಅಂತಿಮ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

- ಮೇಲಿನ ವಿಷಯಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಗಾಗಿ ಕೆಳಕಂಡ ಪ್ರವೇಶಾತಿ ಸಯೋಜಕರನ್ನು ಸಂಪರ್ಕಿಸಬಹುದಾಗಿದೆ:

ಕ್ರ. ಸಂ	ಸ್ನಾತಕೋತ್ತರ ಪ್ರೋಗ್ರಾಮ್	ಮೊಬೈಲ್ ನಂ
1	ಎಂ.ಎ. – ಗ್ರಾಮೀಣಾಭಿವೃದ್ಧಿ (ಪಂಚಾಯತ್ ರಾಜ್ / ಸಹಕಾರ ನಿರ್ವಹಣೆ)	9448056077
2	ಎಂ.ಎ. – ಸಾರ್ವಜನಿಕ ಆಡಳಿತ	8095451616
3	ಎಂ.ಎ. – ಅರ್ಥಶಾಸ್ತ್ರ (ಅಭಿವೃದ್ಧಿ ಅರ್ಥಶಾಸ್ತ್ರ)	8792734641
4	ಎಂ.ಎ. – ರಾಜ್ಯಶಾಸ್ತ್ರ (ಪಂಚಾಯತ್ ರಾಜ್ / ಗ್ರಾಮೀಣಾಭಿವೃದ್ಧಿ)	9448056077
5	ಎಂ.ಎಸ್.ಡಬ್ಲ್ಯೂ – ಸಮುದಾಯ ಅಭಿವೃದ್ಧಿ / ಸಮುದಾಯ ಆರೋಗ್ಯ / ಮಾನವ ಸಂಪನ್ಮೂಲ ನಿರ್ವಹಣೆ	8217721324
6	ಎಂ.ಕಾಂ. – ಉದ್ಯಮ ಶೀಲತೆ/ ಸಹಕಾರ ನಿರ್ವಹಣೆ	8904164031
7	ಎಂ.ಬಿ.ಎ. – ಗ್ರಾಮೀಣ ನಿರ್ವಹಣೆ (ಕೃಷಿ ವ್ಯವಹಾರ ನಿರ್ವಹಣೆ / ಗ್ರಾಮೀಣಾಭಿವೃದ್ಧಿ ನಿರ್ವಹಣೆ) (ಹಣಕಾಸಿನ ನಿರ್ವಹಣೆ / ಮಾನವ ಸಂಪನ್ಮೂಲ ನಿರ್ವಹಣೆ)	7829864257
8	ಎಂ.ಎಸ್ಸಿ. – ಜಿಯೊಇನ್ಫಾರಮೆಟಿಕ್	7892251362
9	ಎಂ.ಎಸ್ಸಿ. – ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ	7899792597
10	ಎಂ.ಸಿ.ಎ.– ಮಾಸ್ಟರ್ ಆಪ್ ಕಂಪ್ಯೂಟರ್ ಅಪ್ಲಿಕೇಶನ್ (ಎಐ)	9916402179
11	ಎಂ.ಪಿ.ಹೆಚ್. – ಸಾರ್ವಜನಿಕ ಆರೋಗ್ಯ	7338373215

ಹೆಚ್ಚಿನ ಮಾಹಿತಿಗಾಗಿ ಪ್ರವೇಶಾತಿ ಮಾಹಿತಿ ಕೇಂದ್ರ – 7975202206 / 7795100729.

ಸೂಚನೆ: 1) ಎಂ.ಬಿ.ಎ ಗ್ರಾಮೀಣ ನಿರ್ವಹಣೆ ಹಾಗೂ ಎಂ.ಸಿ.ಎ. ಪ್ರೋಗ್ರಾಮ್‌ಗಳಿಗೆ **ಕರ್ನಾಟಕ ಪರೀಕ್ಷಾ ಪ್ರಾಧಿಕಾರ** KEA MBA / MCA PGCET ದಿಂದ ಬಂದ ಅಭ್ಯರ್ಥಿಗಳಿಗೆ ಪ್ರವೇಶಾತಿ ನೀಡಲಾಗುವುದು. ಯಾವುದೇ ಖಾಲಿ ಉಳಿದ ಸೀಟುಗಳಿಗೆ **ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆ ಮೂಲಕ** ಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದು. ಇತರೆ ಪ್ರೋಗ್ರಾಮ್‌ಗಳಿಗೆ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ ಪ್ರವೇಶ ನೀಡಲಾಗುವುದು

2) ಕಾಶ್ಮೀರಿ ವಲಸಿಗರು ಮತ್ತು ಕಾಶ್ಮೀರಿ ಪಂಡಿತರು / ಕಾಶ್ಮೀರಿ ಹಿಂದು ಕುಟುಂಬಗಳ ವಲಸೆರಹಿತರು ಕಾಶ್ಮೀರಿ ಕಣಿವೆಯಲ್ಲಿ ವಾಸಿಸುವವರ ಮಕ್ಕಳಿಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪ್ರೋಗ್ರಾಮಗಳಲ್ಲಿ AICTE ಹಾಗೂ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಆದೇಶದಂತೆ ಪ್ರವೇಶಾತಿಯಲ್ಲಿ ಮಿಸಲಾತಿ ನೀಡಲಾಗುವುದು.

ಆದೇಶ ಮೇರೆಗೆ

16-11-2026

ಕುಲಸಚಿವರು

ಪ್ರತಿಗಳು: ಆಪ್ತ ಸಹಾಯಕರು ಕುಲಪತಿಗಳು / ಕುಲಸಚಿವರು/ ವಿತ್ತಾಧಿಕಾರಿಗಳು/ ಸೂಚನಾ ಫಲಕ/ಕಛೇರಿ ಕಡತ.